# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

ವಿಷಯ ಸಂಖ್ಯೆ:28/2008–09

ತುಮಕೂರು ಮುಖ್ಯ ರಸ್ತೆ (ದಕ್ಷಿಣ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 630 – 1330 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿ – (ಲೆಕ್ಕಶೀರ್ಷಿಕೆ ಅಡಿಯಲ್ಲಿ) ತುಮಕೂರು ಮುಖ್ಯ ರಸ್ತೆ (ದಕ್ಷಿಣ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 630 – 1330 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.99.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2007–08, ದಿನಾಂಕ:29/12/2007 ರಲ್ಲಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.95.40 ಲಕ್ಷಗಳಿಗೆ ಟೆಂಡರ್ ಕರೆಯಲಾಗಿ, ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಇಬ್ಬರು ಗುತ್ತಿಗೆದಾರರು ಅರ್ಹರಾಗಿದ್ದು, ಸದರಿ ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ತೆರೆಯಲಾಗಿ ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಎಂ.ಎಸ್.ವೆಂಕಟೇಶ್ ರವರು ಒಟ್ಟು ರೂ.1,45,57,647.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.52.57% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.41.08% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ ಮುನಿರತ್ನ ರವರು ಒಟ್ಟು ರೂ.1,56,66,225.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.64.19% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.51.83% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಎಂ.ಎಸ್.ವೆಂಕಟೇಶ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.41.08% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ: 31/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಗುತ್ತಿಗೆದಾರರು ನಮೂದಿಸಿರುವ ದರ ಶೇ.41.08% ಗಳನ್ನು ಶೇ.14.99 ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಎಂ.ಎಸ್.ವೆಂಕಟೇಶ್ ರವರ ಗುತ್ತಿಗೆಯ ಮೊತ್ತ ರೂ 1,18,65,131.00 ಗಳಾಗಿದ್ದು, ಇದನ್ನು 2007–08ರ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ 1,03,18,402.00 ಗಳಿಗೆ ಹೋಲಿಸಿದಾಗ ಶೇ.14.99% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

**ವಿಷಯ ಸಂಖ್ಯೆ:31/2008–09**

Providing utility cable ducts & chambers for BESCOM & other utility cables in Sheshadri road from Anandarao circle fly over to K.R. Circle on LHS in Bangalore ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

Providing utility cable ducts & chambers for BESCOM & other utility cables in Sheshadri road from Anandarao circle fly over to K.R. Circle on LHS in Bangalore ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು, ರೂ.76.32 ಲಕ್ಷಗಳಿಗೆ ಕಾರ್ಯಪಾಲಕ ಅಭಿಯಂತರರು (ರಸ್ತೆ ಅಗಲೀಕರಣ) ರವರು ಅಂದಾಜುಪಟ್ಟಿಯ ಪ್ರಕ್ರಿಯೆಯನ್ನು ಕೈಗೊಂಡಿದ್ದು ಸದರಿ ಟೆಂಡರಿನಲ್ಲಿ ಶ್ರೀ. ಸಿ.ಎನ್.ಎಸ್. ಮೂರ್ತಿ, ಮತ್ತು ಶ್ರೀ. ಜಿ. ಜಯರಾಮ್ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ದರಗಳನ್ನು ದಿನಾಂಕ: 25/03/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ. ಸಿ.ಎನ್.ಎಸ್. ಮೂರ್ತಿ ರವರು ಒಟ್ಟು ರೂ.1,13,17,682.60 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.48.28% ರಷ್ಟು ಹೆಚ್ಚಾಗಿರುತ್ತದೆ.
(2) ಶ್ರೀ. ಜಿ. ಜಯರಾಮ್ ರವರು ಒಟ್ಟು ರೂ.1,06,83,034.80 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.39.96% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ. ಜಿ. ಜಯರಾಮ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007–08 ನೇ ಸಾಲಿನ ದರಸೂಚಿಗೆ ಹೋಲಿಸಿದಲ್ಲಿ ಶೇ.39.96% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ಅದನ್ವಯ ದಿನಾಂಕ:29/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳನ್ನು ಶೇ.39.96% ರಿಂದ ಶೇ.19.95% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ. ಜಿ. ಜಯರಾಮ್ ರವರ ಗುತ್ತಿಗೆಯ ಮೊತ್ತ ರೂ.91,55,473.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಮೊತ್ತ ರೂ.76,32,741.00 ಗಳಿಗೆ ಹೋಲಿಸಿದಾಗ ಶೇ.19.95% ರಷ್ಟು ಹೆಚ್ಚಿರುವ ಟೆಂಡರ್‌ನ ಅನುಮೋದನೆಗಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ನಿರ್ಣಯ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

**ವಿಷಯ ಸಂಖ್ಯೆ:32/2008–09**

ತುಮಕೂರು ಮುಖ್ಯ ರಸ್ತೆಯ (ಉತ್ತರ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 2200–3200 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿ – (ಲೆಕ್ಕಶೀರ್ಷಿಕೆಯ ಅಡಿಯಲ್ಲಿ) ತುಮಕೂರು ಮುಖ್ಯ ರಸ್ತೆಯ (ಉತ್ತರ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 2200–3200 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.99.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2007–08, ದಿನಾಂಕ:29/12/2007 ರಲ್ಲಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.96.20 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ:17/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 17/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ.ಮುನಿರತ್ನ ಮತ್ತು ಶ್ರೀ ಎಂ.ಎಸ್.ವೆಂಕಟೇಶ್ ರವರು ಅರ್ಹರಾದ ಗುತ್ತಿಗೆದಾರರುಗಳಾಗಿರುತ್ತಾರೆ. ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 27/03/08 ರಂದು ತೆರೆಯಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಮುನಿರತ್ನ ರವರು ಒಟ್ಟು ರೂ.2,22,67,544.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.131.49% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.106.13% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ ಎಂ.ಎಸ್.ವೆಂಕಟೇಶ್ ರವರು ಒಟ್ಟು ರೂ.2,17,33,017.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.125.93% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.101.18% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಎಂ.ಎಸ್.ವೆಂಕಟೇಶ್ ರವರು ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.101.18% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುವುದರಿಂದ, ದಿನಾಂಕ:31/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.101.18% ಗಳನ್ನು ಶೇ.14.99% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಎಂ.ಎಸ್.ವೆಂಕಟೇಶ್ ರವರ ಗುತ್ತಿಗೆಯ ಮೊತ್ತ ರೂ.1,24,21,880.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ.1,08,02,574.00 ಗಳಿಗೆ ಹೋಲಿಸಿದಾಗ ಶೇ.14.99% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

**ವಿಷಯ ಸಂಖ್ಯೆ:33/2008–09**

ತುಮಕೂರು ಮುಖ್ಯ ರಸ್ತೆಯ (ದಕ್ಷಿಣ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 0–630 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿ – (ಲೆಕ್ಕಶೀರ್ಷಿಕೆ ಅಡಿಯಲ್ಲಿ) ತುಮಕೂರು ಮುಖ್ಯ ರಸ್ತೆಯ (ದಕ್ಷಿಣ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 0–630 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಅಂದಾಜು ಮೊತ್ತ ರೂ.97.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:309/2007–08, ದಿನಾಂಕ:29/12/2007 ರಲ್ಲಿ ನೀಡಿರುತ್ತಾರೆ. ಸದರಿ ಕಾಮಗಾರಿಗೆ ರೂ.93.60 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ದಿನಾಂಕ:17/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ 17/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ ಎಂ.ಎಸ್.ವೆಂಕಟೇಶ್ ಮತ್ತು ಶ್ರೀ ಮುನಿರತ್ನ, ರವರು ಅರ್ಹರಾದ ಗುತ್ತಿಗೆದಾರರಾಗಿರುತ್ತಾರೆ. ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ:27/03/08 ರಂದು ತೆರೆಯಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಎಂ.ಎಸ್.ವೆಂಕಟೇಶ್ ರವರು ಒಟ್ಟು ರೂ.1,44,66,382.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.54.53% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.42.23% ರಷ್ಟು ಹೆಚ್ಚಾಗಿರುತ್ತದೆ.
(2) ಶ್ರೀ ಮುನಿರತ್ನ ರವರು ಒಟ್ಟು ರೂ.1,52,75,805.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಹೋಲಿಸಿದಾಗ ಶೇ.63.18% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.50.19% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಎಂ.ಎಸ್.ವೆಂಕಟೇಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.42.23% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುವುದರಿಂದ ದಿನಾಂಕ 31/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.42.23% ಗಳನ್ನು ಶೇ.14.99% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಎಂ.ಎಸ್.ವೆಂಕಟೇಶ್ ರವರ ಗುತ್ತಿಗೆಯ ಮೊತ್ತ ರೂ1,16,95,549.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ1,01,70,927.00 ಗಳಿಗೆ ಹೋಲಿಸಿದಾಗ ಶೇ.14.99% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:01/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

<u>ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು</u>

<u>ವಿಷಯ ಸಂಖ್ಯೆ:40/2008–09</u>

ತುಮಕೂರು ಮುಖ್ಯ ರಸ್ತೆ (ಉತ್ತರ ಭಾಗ) ಸರ್ವೀಸ್ ರಸ್ತೆ ಸಾಬೂನು ಕಾರ್ಖಾನೆಯಿಂದ ರಾಷ್ಟ್ರೀಯ ಹೆದ್ದಾರಿಯ ಗಡಿ ಭಾಗದವರೆಗಿನ (ಕೆ.ಎಲ್.ಇ ಡೆಂಟಲ್ ಕಾಲೇಜು) Chainage 1100 –2200 ಮೀಟರ್ ಸಿವಿಲ್ ಮತ್ತು ಡಾಂಬರೀಕರಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

<u>ಪ್ರಸ್ತಾವನೆ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟೀರಿಯಲ್ ಮತ್ತು ಸಬ್ – ಆರ್ಟೀರಿಯಲ್ ರಸ್ತೆಗಳ ಅಭಿವೃದ್ಧಿ ಹಾಗೂ ಪುನಶ್ಚೇತನಗೊಳಿಸುವ ಕಾಮಗಾರಿಯ ಅಂದಾಜು ಮೊತ್ತ ರೂ.99.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಆಡಳಿತಗಾರರು ವಿಷಯದ ಸಂಖ್ಯೆ:319/2007–08, ದಿನಾಂಕ:29/12/2007 ರಂದು ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ರೂ.96.00 ಲಕ್ಷಗಳಿಗೆ ಟೆಂಡರ್ ಕರೆಯಲಾಗಿರುತ್ತದೆ. ಈ ಕಾಮಗಾರಿಗೆ ದಿನಾಂಕ:17/03/08 ರಂದು ಪೂರ್ಣಗೊಂಡ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲಾಗಿ, ದಿನಾಂಕ: 17/03/08 ರಂದು ತಾಂತ್ರಿಕ ಬಿಡ್‌ಗಳನ್ನು ತೆರೆಯಲಾಗಿರುತ್ತದೆ. ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಇಬ್ಬರು ಗುತ್ತಿಗೆದಾರರು ಟೆಂಡರ್ ದಾಖಲೆಗಳನ್ನು ಸಲ್ಲಿಸಿದ್ದು, ಸದರಿಯವರ ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಶ್ರೀ ಮುನಿರತ್ನ ಮತ್ತು ಶ್ರೀ ಎಂ.ಎಸ್.ವೆಂಕಟೇಶ್. ಗುತ್ತಿಗೆದಾರರು ಅರ್ಹರಾಗಿರುತ್ತಾರೆ. ಅರ್ಹರಾದ ಇಬ್ಬರು ಗುತ್ತಿಗೆದಾರರ ಆರ್ಥಿಕ ಬಿಡ್‌ಗಳನ್ನು ದಿನಾಂಕ: 27/03/08 ರಂದು ತೆರೆಯಲಾಗಿರುತ್ತದೆ. ಇಬ್ಬರು ಗುತ್ತಿಗೆದಾರರು ನಮೂದಿಸಿರುವ ದರಗಳು ಕೆಳಕಂಡಂತಿದೆ.

(1) ಶ್ರೀ ಮುನಿರತ್ನ ರವರು ಒಟ್ಟು ರೂ.2,19,29,254.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.128.41% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.102.33% ರಷ್ಟು ಹೆಚ್ಚಾಗಿರುತ್ತದೆ.

(2) ಶ್ರೀ ಎಂ.ಎಸ್.ವೆಂಕಟೇಶ್ ರವರು ಒಟ್ಟು ರೂ.2,11,53,857.00 ನಮೂದಿಸಿದ್ದು, ಇದು 2007–08ನೇ ಸಾಲಿನ ದರ ಪಟ್ಟಿಗೆ ಶೇ.120.33% ರಷ್ಟು ಹೆಚ್ಚಾಗಿದ್ದು ಹಾಗೂ 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.95.18% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಶ್ರೀ ಎಂ.ಎಸ್.ವೆಂಕಟೇಶ್ ರವರು ಕನಿಷ್ಠ ದರ ನಮೂದಿಸಿರುವ ಗುತ್ತಿಗೆದಾರರಾಗಿದ್ದು, 2007–08 ನೇ ಸಾಲಿನ ದರ ಪಟ್ಟಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳಿಗೆ ಹೋಲಿಸಿದಾಗ ಶೇ.95.18% ರಷ್ಟು ಹೆಚ್ಚಿಗೆ ದರವನ್ನು ನಮೂದಿಸಿರುತ್ತಾರೆ. ತದರನ್ವಯ ದಿನಾಂಕ: 31/03/08 ರಂದು ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿದ್ದು, ಸದರಿ ಗುತ್ತಿಗೆದಾರರು ನಮೂದಿಸಿರುವ ದರ ಶೇ.95.18% ಗಳನ್ನು ಶೇ.14.99% ಗೆ ಇಳಿಸಿ ಸಂಧಾನ ಪತ್ರವನ್ನು ನೀಡಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಎಂ.ಎಸ್.ವೆಂಕಟೇಶ್ ರವರ ಗುತ್ತಿಗೆಯ ಮೊತ್ತ ರೂ 1,24,62,746.00 ಗಳಾಗಿದ್ದು, ಇದನ್ನು 2007–08 ನೇ ಸಾಲಿನ ದರ ಸೂಚಿ ಹಾಗೂ ಹೆಚ್ಚುವರಿ ಸಿಮೆಂಟ್ / ಬಿಟುಮಿನ್ ದರಗಳ ಮೊತ್ತ ರೂ.1,08,38,113.00 ಗಳಿಗೆ ಹೋಲಿಸಿದಾಗ ಶೇ.14.99% ರಷ್ಟು ಹೆಚ್ಚಿರುವ ಈ ಟೆಂಡರ್‌ನ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:08/04/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು

**ವಿಷಯದ ಸಂಖ್ಯೆ:42/2008–09**

ಹೂ ಕುಂಡಗಳನ್ನು ರಸ್ತೆಯ ಪಕ್ಕದಲ್ಲಿ ಅಳವಡಿಸಲು ಜಾಹೀರಾತು ಹಕ್ಕುಗಳ ಎದುರಿಗೆ 36 ತಿಂಗಳಿಗೆ ನೀಡುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ (1) ಎಂ.ಜಿ.ರಸ್ತೆ : ಟ್ರಿನಿಟಿ ವೃತ್ತದಿಂದ ಅನಿಲ್ ಕುಂಬ್ಳೆ ವೃತ್ತವರೆಗೆ (2) ರೆಸಿಡೆನ್ಸಿ ರಸ್ತೆ: ಕ್ಯಾಷ್ ಫಾರ್ಮಸಿ ಜಂಕ್ಷನ್‌ನಿಂದ ಮೆಯೋಹಾಲ್ ವೃತ್ತ (3) ಏರ್ ಪೋರ್ಟ್ ರಸ್ತೆ: ಏರ್ ಪೋರ್ಟ್ 1ನೇ ಗೇಟ್ ನಿಂದ ದೊಮ್ಮಲೂರು ಜಂಕ್ಷನ್ (4) ಸ್ಯಾಂಕಿ ರಸ್ತೆ ಕಾವೇರಿ ಜಂಕ್ಷನ್ ನಿಂದ ಹೈಗ್ರೌಂಡ್ಸ್ ರಸ್ತೆಗಳ ಪಕ್ಕದಲ್ಲಿ 500 ಹೂ ಕುಂಡಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ಅಳವಡಿಸಿ, ಹೂ ಕುಂಡಗಳನ್ನು 3 ದಿನಕ್ಕೊಮ್ಮೆ ಬದಲಾಯಿಸುವ ಮತ್ತು ಬಿಸಿಲಿಗೆ ಬಾಡದಂತೆ ಇರುವ ಗಿಡಗಳನ್ನಿಟ್ಟು ಸುಂದರೀಕಣಗೊಳಿಸುವಂತೆ ಹಾಗೂ ಹೂ ಕುಂಡಗಳ ಎರಡು ಭಾಗದಲ್ಲಿ 2 x 2.5 ಅಡಿ ಜಾಗದಲ್ಲಿ ಜಾಹೀರಾತು ಪ್ರದರ್ಶನ ಮಾಡಲು ಉಳಿದ ಎರಡು ಭಾಗಗಳಲ್ಲಿ ಪಾಲಿಕೆಯ ಸಂದೇಶಗಳನ್ನು ಒಳಗೊಂಡಂತೆ ಜಾಹೀರಾತುಗಳನ್ನು ಪ್ರದರ್ಶಿಸವ ಬಗ್ಗೆ ದಿನಾಂಕ:06/03/2008 ರಂದು ಟೆಂಡರ್ ಕಂ ಹರಾಜು ನಡೆಸಲಾಗಿರುತ್ತದೆ. ಸದರಿ ಟೆಂಡರ್ ಕಂ ಹರಾಜಿನಲ್ಲಿ ಈ ಕೆಳಕಂಡ ಜಾಹೀರಾತು ಸಂಸ್ಥೆಗಳು ಯಶಸ್ವಿಯಾಗಿರುತ್ತಾರೆ.

| ಪ್ಯಾಕೇಜ್ ಸಂಖ್ಯೆ: 01 | | | | |
|---|---|---|---|---|
| ಕ್ರ. ಸಂ. | ಜಾಹೀರಾತು ಸಂಸ್ಥೆಯ ಹೆಸರು | ಹೂ ಕುಂಡಗಳ ಸಂಖ್ಯೆ | ಕನಿಷ್ಠ ನೆಲ ಬಾಡಿಗೆ | ಯಶಸ್ವಿ ಹರಾಜು/ಹಣಕಾಸಿನ ಬಿಡ್ ಮೊತ್ತ |
| 1 | ಮೆ॥ ಅಲೇಸ್ ಕಲೆಕ್ಷನ್ಸ್ | 500 | ರೂ.2,50,000 | ರೂ.3,80,000 |
| | ಒಟ್ಟು | 500 | ರೂ.2,50,000 | ರೂ.3,80,000 |

ಒಟ್ಟು 500 ಹೂ ಕುಂಡಗಳಿಗೆ ಬಸ್ ತಂಗುದಾಣಗಳಿಂದ ನೆಲ ಬಾಡಿಗೆ ರೂ.3,80,000/- ಗಳು ಮತ್ತು ಜಾಹೀರಾತು ತೆರಿಗೆ (ಪ್ರತಿ ಕುಂಡಕ್ಕೆ [illegible] ಚದರ ಅಡಿಗಳು) ರೂ.2,58,750/-ಗಳು ಒಟ್ಟು ರೂ.6,38,750/- ಗಳನ್ನು ಪ್ರತಿ ವರ್ಷ ವರಮಾನವಾಗಿ ಪಡೆಯಬಹುದಾಗಿದೆ. ಸದರಿ ಬಿಡ್‌ದಾರರಿಗೆ 3 ವರ್ಷಗಳ ಅವಧಿಗೆ ಮೇಲ್ಕಂಡ ಪ್ಯಾಕೇಜ್‌ನಲ್ಲಿ ಬರುವ ಹೂ ಕುಂಡಗಳನ್ನು ಅಳವಡಿಸಿ ನಿರ್ವಹಣೆ ಮಾಡಿ 03 ವರ್ಷಗಳ ನಂತರ ಮತ್ತೆ ನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಕರಾರು ಮಾಡಿಕೊಳ್ಳಬೇಕಾಗಿದೆ. ಟೆಂಡರ್ ನಿಯಮಾವಳಿಗಳಂತೆ ಮೊದಲ 12 ತಿಂಗಳುಗಳಿಗೆ ಕರಾರು ಪತ್ರ ಮಾಡಿಕೊಂಡು ನಂತರ ಯಶಸ್ವಿ ನಿರ್ವಹಣೆ ಮಾಡಿದ್ದಲ್ಲಿ 24 ತಿಂಗಳುಗಳಿಗೆ ವಿಸ್ತರಿಸಬಹುದಾಗಿದೆ.

ಸದರಿ ಹೂ ಕುಂಡಗಳನ್ನು ಅಳವಡಿಸಿ ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ಹೂ ಕುಂಡಗಳಲ್ಲಿ ಅಳವಡಿಸಿರುವ ಎಲ್ಲಾ ಪರಿಕರಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತುಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 24 ತಿಂಗಳುಗಳಿಗೆ ಕರಾರು ಮಾಡಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು**

**ವಿಷಯದ ಸಂಖ್ಯೆ:43/2008–09**

ಖಾಲಿ ಇರುವ ನಿರ್ಮಲ ಶೌಚಾಲಯಗಳ ಜಾಹೀರಾತು ಹಕ್ಕುಗಳ ಎದುರಿಗೆ 36 ತಿಂಗಳಿಗೆ ನೀಡುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಸಾರ್ವಜನಿಕ ಹಿತದಷ್ಠಿಯಿಂದ ಪಾಲಿಕೆಯ ಸ್ವತ್ತುಗಳಲ್ಲಿ ಪಾವತಿ ಮಾಡಿ ಉಪಯೋಗಿಸುವ ನಿರ್ಮಲ ಶೌಚಾಲಯಗಳನ್ನು ಈಗಾಗಲೇ ನಿರ್ಮಿಸಲಾಗಿರುತ್ತದೆ. ಸದರಿ ನಿರ್ಮಲ ಶೌಚಾಲಯಗಳ ಮೇಲೆ ಅನೇಕ ಸಂಘ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳು ಸಹ ಅನಧಿಕೃತವಾಗಿ ಮತ್ತು ನಗರದ ಸೌಂದರ್ಯಕ್ಕೆ ಧಕ್ಕೆ ಉಂಟುಮಾಡುವ ರೀತಿಯಲ್ಲಿ ಪೋಸ್ಟರ್‌ಗಳನ್ನು, ಬ್ಯಾನರ್‌ಗಳನ್ನು ಮತ್ತು ಭಿತ್ತಿಪತ್ರಗಳನ್ನು ಸಹ ಅಂಟಿಸಿ ನಿರ್ಮಲ ಶೌಚಾಲಯಗಳನ್ನು ಹಾಳುಗೆಡುವ ರೀತಿಯಲ್ಲಿ ಮಾಡುತ್ತಿರುವುದು ಕಂಡುಬಂದಿರುತ್ತದೆ. ಆದ್ದರಿಂದ, ಸದರಿ ನಿರ್ಮಲ ಶೌಚಾಲಯಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ನಿರ್ವಹಣೆ ಮಾಡುವುದು ಪಾಲಿಕೆಯ ಆರ್ಥಿಕ ಹಿತದೃಷ್ಠಿಯಿಂದ ಮತ್ತು ನಗರದ ಸೌಂದರ್ಯದ ಹಿತದೃಷ್ಠಿಯಿಂದ ನಿರ್ವಹಣೆ ಮಾಡುವುದು ಉತ್ತಮವೆಂದು ಕಂಡುಬಂದಿರುತ್ತದೆ.

ಆದ್ದರಿಂದ ಸುಮಾರು 126 ನಿರ್ಮಲ ಶೌಚಾಲಯಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ನಿರ್ವಹಣೆ ಮಾಡಲು ಟೆಂಡರ್ ಕಂ ಹರಾಜನ್ನು ದಿನಾಂಕ:31/01/2008 ರಂದು ಮಾಡಲಾಗಿದ್ದು, ಸದರಿ ಟೆಂಡರ್ ಕಂ ಹರಾಜಿನಲ್ಲಿ ಕೆಳಕಂಡ ಜಾಹೀರಾತು ಸಂಸ್ಥೆಯು ಭಾಗವಹಿಸಿ ಯಶಸ್ವಿಯಾಗಿರುತ್ತಾರೆ.

| ಪ್ಯಾಕೇಜ್ ಸಂಖ್ಯೆ: 01 | | | | |
|---|---|---|---|---|
| ಕ್ರ. ಸಂ. | ಜಾಹೀರಾತು ಸಂಸ್ಥೆಯ ಹೆಸರು | ನಿರ್ಮಲ ಶೌಚಾಲಯಗಳ ಸಂಖ್ಯೆ | ಕನಿಷ್ಠ ನೆಲ ಬಾಡಿಗೆ | ಯಶಸ್ವಿ ಹರಾಜು/ಹಣಕಾಸಿನ ಬಿಡ್ ಮೊತ್ತ |
| 1 | ಮೆ॥ ಹೈಪ್ ಇಂಟಿಗ್ರೇಟೆಡ್ ಕಮ್ಯೂನಿಕೇಷನ್ಸ್ | 126 | ರೂ.12,60,000 | ರೂ.16,83,000 |
| | **ಒಟ್ಟು** | 126 | ರೂ.12,60,000 | ರೂ.16,83,000 |

ಮೇಲಿನ ಒಟ್ಟು 126 ನಿರ್ಮಲ ಶೌಚಾಲಯಗಳಿಂದ ನೆಲ ಬಾಡಿಗೆ ರೂ.16,83,000/–ಗಳು ಮತ್ತು ಜಾಹೀರಾತು ತೆರಿಗೆಯು (ಪ್ರತಿ ಶೌಚಾಲಯಕ್ಕೆ 300 ಚದರ ಅಡಿಗಳು) ರೂ.36,51,480/–ಗಳ ಒಟ್ಟು ರೂ.53,34,480/– ಗಳನ್ನು ಪ್ರತಿ ವರ್ಷ ವರಮಾನವಾಗಿ ಮೇಲಿನ ನಿರ್ಮಲ ಶೌಚಾಲಯಗಳಿಗೆ ಸಂಬಂಧಿಸಿದಂತೆ ಪಡೆಯಬಹುದಾಗಿದೆ. ಸದರಿ ಬಿಡ್‌ದಾರರಿಗೆ 3 ವರ್ಷಗಳ ಅವಧಿಗೆ ಮೇಲ್ಕಂಡ ಪ್ಯಾಕೇಜ್‌ನಲ್ಲಿ 126 ನಿರ್ಮಲ ಶೌಚಾಲಯಗಳು ಬರುವುದರಿಂದ ಜಾಹೀರಾತು ಹಕ್ಕುಗಳ ಎದುರಿಗೆ ನಿರ್ವಹಣೆ ಮಾಡಿ 03 ವರ್ಷಗಳ ನಂತರ ಮತ್ತೆ ನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಕರಾರು ಮಾಡಿಕೊಳ್ಳಬೇಕಾಗಿದೆ. ಟೆಂಡರ್ ನಿಯಮಾವಳಿಗಳಂತೆ ಮೊದಲ 12 ತಿಂಗಳುಗಳಿಗೆ ಕರಾರು ಪತ್ರ ಮಾಡಿಕೊಂಡು ನಂತರ ಯಶಸ್ವಿ ನಿರ್ವಹಣೆ ಮಾಡಿದ್ದಲ್ಲಿ 24 ತಿಂಗಳುಗಳಿಗೆ ವಿಸ್ತರಿಸಬಹುದಾಗಿದೆ.

ಸದರಿ ನಿರ್ಮಲ ಶೌಚಾಲಯಗಳನ್ನು ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ನಿರ್ಮಲ ಶೌಚಾಲಯಗಳಲ್ಲಿ ಅಳವಡಿಸಿರುವ ಎಲ್ಲಾ ಪರಿಕರಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತುಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 24 ತಿಂಗಳುಗಳಿಗೆ ಕರಾರು ಮಾಡಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು

**ವಿಷಯದ ಸಂಖ್ಯೆ:44/2008–09**

ಪಿ.ಪಿ.ಪಿ.ಆಧಾರದ ಮೇಲೆ 'ಡಿ' ಮಾದರಿಯ ಬಸ್ ತಂಗುದಾಣಗಳನ್ನು ನಿರ್ಮಿಸಲು ಜಾಹೀರಾತು ಹಕ್ಕುಗಳ ಎದುರಿಗೆ 60 ತಿಂಗಳಿಗೆ ನೀಡುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2000 ಇಸವಿ ಹಿಂದೆ ಸಾರ್ವಜನಿಕರಿಗೆ ಬಿಸಿಲು, ಮಳೆ ಇತ್ಯಾದಿಗಳಿಂದ ರಕ್ಷಣೆ ಒದಗಿಸಲು ಪಾಲಿಕೆಯ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್‌ವತಿಯಿಂದ ಚಿಕ್ಕ ಚಿಕ್ಕದಾದ ಬಸ್ ತಂಗುದಾಣಗಳನ್ನು ನಿರ್ಮಿಸಲಾಗುತ್ತಿತ್ತು. ಕೆಲವು ಸೇವಾ ಸಂಸ್ಥೆಗಳಾದ ಲಯನ್ಸ್ ಕ್ಲಬ್, ಕನ್ನಡ ಪರ ಸಂಘಗಳು ಇತ್ಯಾದಿಯವರು ಕೆಲವು ಬಸ್ ತಂಗುದಾಣಗಳನ್ನು ಪ್ರಯಾಣಿಕರಿಗೆ ನಿರ್ಮಿಸುತ್ತಿದ್ದರು. 2000–01 ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಟ್ರಾಫಿಕ್ ಇಂಜಿನಿಯರಿಂಗ್ ಸೆಲ್‌ನ ಅಧಿಕಾರಿಗಳು, ಬಿಎಂಟಿಸಿ ಅಧಿಕಾರಿಗಳು ಮತ್ತು ಸಂಚಾರಿ ಪೊಲೀಸ್ ಅಧಿಕಾರಿಗಳು ಜಂಟಿಯಾಗಿ ನಗರದಲ್ಲಿ ಸಮೀಕ್ಷೆ ಮಾಡಿ ಸುಮಾರು 700 ಬಸ್‌ನಿಲ್ದಾಣಗಳನ್ನು ಗುರುತಿಸಿ ಈ ಸ್ಥಳಗಳಲ್ಲಿ ಬಸ್‌ಪ್ರಯಾಣಿಕರಿಗೆ ತಂಗುದಾಣಗಳನ್ನು ನಿರ್ಮಿಸಲು ಉದ್ದೇಶಿಸಿರುವುದು ತಿಳಿದು ಬರುತ್ತದೆ. 2000–01 ನೇ ಸಾಲಿನಲ್ಲಿ ಸಾರ್ವಜನಿಕರಿಗೆ ಆಕರ್ಷಣೆಯಾಗಿ ಸುಸಜ್ಜಿತ, ಉತ್ತಮ ಗುಣಮಟ್ಟದ ವಿನೂತನ ಮಾದರಿಯ ಬಸ್ ತಂಗುದಾಣಗಳ ಮಾದರಿಗಳನ್ನು ತಯಾರಿಸಲು ಅಂದಿನ ಬಿ.ಎ.ಟಿ.ಎಫ್. ಸಹಕಾರ ಪಡೆದು ಎ.ಬಿ.ಸಿ. ಮತ್ತು 'ಡಿ' ಮಾದರಿಗಳನ್ನು ಅಭಿವೃದ್ಧಿ ಪಡಿಸಿ ಬಸ್ ತಂಗುದಾಣಗಳನ್ನು ನಿರ್ಮಿಸಲು ಲಭ್ಯವಾಗುವ ಸ್ಥಳಾವಕಾಶದ ಆಧಾರದಲ್ಲಿ ಈ ಮಾದರಿಗಳ ಬಸ್ ತಂಗುದಾಣಗಳನ್ನು ನಿರ್ಮಿಸಲು 6 ಹಂತಗಳಲ್ಲಿ ಜಾಹೀರಾತು ಹಕ್ಕುಗಳ ಎದುರಿಗೆ ಟೆಂಡರ್ ಕರೆದಿರುವುದು ಕಂಡು ಬರುತ್ತದೆ. ಈ 6 ಹಂತಗಳಲ್ಲಿ ಒಟ್ಟು 548 ಬಸ್‌ತಂಗುದಾಣಗಳನ್ನು ನಿರ್ಮಿಸಿರುವುದು ಕಂಡು ಬರುತ್ತದೆ. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಇವರು ಪತ್ರ ಬರೆದು, ಬೆಂಗಳೂರು ಅಂತರಾಷ್ಟ್ರೀಯ ವಿಮಾಣ ನಿಲ್ದಾಣವು ಮಾರ್ಚ್–2008 ರಂದು ಉದ್ಘಾಟನೆಯಾಗಲಿದ್ದು, ಈ ಸಂಬಂಧ ಸಾರಿಗೆ ಸಂಸ್ಥೆಯು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಬೆಂಗಳೂರು ನಗರದಿಂದ ವಿಮಾನ ನಿಲ್ದಾಣಕ್ಕೆ ತೆರಳಲು ವಿಶೇಷ ಬಸ್ ಸೌಲಭ್ಯವನ್ನು ಒದಗಿಸಲಿದೆಯೆಂದು ತಿಳಿಸಿ, ಕೆಲವು ಮಾರ್ಗ ಸೂಚಿಗಳನ್ನು ನೀಡಿ ಅತ್ಯಾಧುನಿಕ ಬಸ್ ತಂಗುದಾಣಗಳನ್ನು ನಿರ್ಮಿಸಲು ಕೋರಿರುತ್ತಾರೆ. ಈ ಸಂಬಂಧ 54 ಬಸ್ ತಂಗುದಾಣಗಳನ್ನು ನಿರ್ಮಿಸಲು ಟೆಂಡರ್‌ನ ಹರಾಜನ್ನು ದಿನಾಂಕ:27/02/2008 ರಂದು ಬಿಡಪ್ ಕಂ ಹರಾಜು ಮಾಡಲಾಗಿತ್ತು. ಸದರಿ ಬಿಡಪ್ ಕಂ ಹರಾಜಿನಲ್ಲಿ ಈ ಕೆಳಕಂಡಂತೆ ಜಾಹೀರಾತು ಸಂಸ್ಥೆಗಳು ಯಶಸ್ವಿಯಾಗಿರುತ್ತಾರೆ.

| ಪ್ಯಾಕೇಜ್ ಸಂಖ್ಯೆ: 01 | | | | |
|---|---|---|---|---|
| ಕ್ರ. ಸಂ. | ಜಾಹೀರಾತು ಸಂಸ್ಥೆಯ ಹೆಸರು | ಬಸ್ ತಂಗುದಾಣಗಳ ಸಂಖ್ಯೆ | ಕನಿಷ್ಠ ನೆಲ ಬಾಡಿಗೆ | ಯಶಸ್ವಿ ಹರಾಜು/ಹಣಕಾಸಿನ ಬಿಡ್ ಮೊತ್ತ |
| 1 | ಮೆ॥ ಟೈಮ್ಸ್ ಇನ್ನೋವೇಟಿವ್ ಮೀಡಿಯಾ ಲಿಮಿಟೆಡ್ | 54 | ರೂ.54,00,000 | ರೂ.1,84,54,321 |
| | ಒಟ್ಟು | 54 | ರೂ.54,00,000 | ರೂ.1,84,54,321 |

ಒಟ್ಟು 54 ಬಸ್ ತಂಗುದಾಣಗಳಿಂದ ನೆಲ ಬಾಡಿಗೆ ರೂ.1,84,54,321/– ಮತ್ತು ಜಾಹೀರಾತು ತೆರಿಗೆ (ಪ್ರತಿ ತಂಗುದಾಣಕ್ಕೆ 260 ಚದರ ಅಡಿಗಳು) ರೂ.13,41,361/– ಒಟ್ಟು ರೂ.1,97,95,681/– ಗಳನ್ನು ಪ್ರತಿ ವರ್ಷ ವರಮಾನವಾಗಿ ಪಡೆಯಬಹುದಾಗಿದೆ. ಸದರಿ ಬಿಡ್‌ದಾರರಿಗೆ 5 ವರ್ಷಗಳ (ಒಟ್ಟು 60 ತಿಂಗಳು) ಅವಧಿಗೆ ಮೇಲ್ಕಂಡ ಪ್ಯಾಕೇಜ್‌ನಲ್ಲಿ ಬರುವ ಬಸ್ ತಂಗುದಾಣಗಳನ್ನು ನಿರ್ಮಿಸಿ ನಿರ್ವಹಣೆ ಮಾಡಲು 60 ತಿಂಗಳ ನಂತರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಕರಾರು ಮಾಡಿಕೊಳ್ಳಬೇಕಾಗಿದೆ. ಟೆಂಡರ್ ನಿಯಮಾವಳಿಗಳಂತೆ ಮೊದಲು 12 ತಿಂಗಳುಗಳಿಗೆ ಕರಾರು ಪತ್ರ ಮಾಡಿಕೊಂಡು ನಂತರ ಯಶಸ್ವಿ ನಿರ್ವಹಣೆ ಮಾಡಿದ್ದಲ್ಲಿ 48 ತಿಂಗಳುಗಳಿಗೆ ವಿಸ್ತರಿಸಬಹುದಾಗಿದೆ.

ಸದರಿ ಬಸ್ ತಂಗುದಾಣಗಳನ್ನು ನಿರ್ಮಿಸಿ, ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ಬಸ್ ತಂಗುದಾಣಗಳಲ್ಲಿ ಅಳವಡಿಸಿರುವ ಎಲ್ಲಾ ಪರಿಕರಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತುಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 48 ತಿಂಗಳುಗಳಿಗೆ ಕರಾರು ಮಾಡಿಕೊಳ್ಳುವ ಬಗ್ಗೆ ಸೂಕ್ತ ನಿರ್ಣಯಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು

ವಿಷಯದ ಸಂಖ್ಯೆ:45/2008–09

ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಗಾರ್ಬೆಜ್ ಬಿನ್ಸ್ ಮತ್ತು ಗಾರ್ಬೆಜ್ ಪಿಕ್ ಅಪ್ ಪಾಯಿಂಟ್‌ಗಳನ್ನು ಜಾಹೀರಾತು ಹಕ್ಕುಗಳ ಎದುರಿಗೆ ಅಳವಡಿಸಲು 36 ತಿಂಗಳಿಗೆ ನೀಡುವ ಬಗ್ಗೆ.

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸ್ವಚ್ಛತೆ ಕಾಪಾಡುವ ದೃಷ್ಠಿಯಿಂದ ಪ್ರತಿದಿನ ಉತ್ಪತ್ತಿಯಾಗುವ 3,500 ಟನ್‌ಗಳಷ್ಟು ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲು ಸ್ವಚ್ಛತಾ ಸೇವೆಯ ಗುತ್ತಿಗೆಯಂತಹ ಹಲವಾರು ಕ್ರಮಗಳನ್ನು ಕೈಗೊಂಡಿದ್ದರೂ, ನಗರದ ಸ್ವಚ್ಛತೆಯನ್ನು ಪೂರ್ಣವಾಗಿ ಕಾಪಾಡಲು ಅಸಾಧ್ಯವಾದ ಕಾರಣ ಸಾರ್ವಜನಿಕರು ಎಸೆಯುವ ತ್ಯಾಜ್ಯವಸ್ತು (ನಿರುಪಯುಕ್ತ) ಗಳನ್ನು ತಡೆಗಟ್ಟಲು Compounding of Affence Rules, 1996 ರ ಪ್ರಕಾರ ರಾಜಿದಂಡ ವಿಧಿಸಿ, ಅಧಿನಿಯಮದ ಉಪ ಬಂದಗಳ ಅನ್ವಯ ಕ್ರಮ ಜರುಗಿಸುವ ಸಂಬಂಧ ಈ ಯೋಜನೆಗಳಡಿಯಲ್ಲಿ 'Little Cops' ಎಂದು ಗುರುತಿಸಿ ಅಪರಾಧವೆಸಗುವ ವ್ಯಕ್ತಿ/ಸಂಸ್ಥೆಗಳಿಂದ ಪ್ರತಿ ಅಪರಾಧಕ್ಕೆ ದಂಡವನ್ನು ವಸೂಲಿ ಮಾಡಲು ಈ ಯೋಜನೆಯಲ್ಲಿ ಅಧಿಕಾರವನ್ನು ಟೆರಿಟೊರಿಯಲ್ ಆರ್ಮಿ ಅಂಡ್ ಇನ್‌ಸ್ಟ್ಯುಟೀವ್ ಆಫ್ ಟೆಕ್ನಾಲಜಿ ಸಂಸ್ಥೆಯವರಿಗೆ ನೀಡಲಾಗಿದೆ.

ಆದ್ದರಿಂದ ಕಸದ ತೊಟ್ಟಿಗಳು ಇಲ್ಲದೇ ಇರುವ ಕಾರಣ ಆರ್ಟೀರಿಯಲ್ ರಸ್ತೆಗಳಲ್ಲಿ ಪ್ರತಿ 50 ಮೀಟರ್‌ಗಳಿಗೆ 3 ಪ್ಲಾಸ್ಟಿಕ್ ಕಸದ ತೊಟ್ಟಿಗಳನ್ನು ಇಡಿಸುವುದು ಅತ್ಯಂತ ಅವಶ್ಯಕವಾಗಿದೆ. 3 ಪ್ಲಾಸ್ಟಿಕ್ ತೊಟ್ಟಿಗಳಲ್ಲಿ ಒಂದನ್ನು ಡಿಗ್ರೇಡಬಲ್ ಕಸವನ್ನು ಹಾಕಲು, ಎರಡನೇಯದರಲ್ಲಿ ಪೇಪರ್ ಹಾಕಲು ಮತ್ತು ಮೂರನೆಯದರಲ್ಲಿ ಕಲ್ಲು ಮತ್ತು ಕಬ್ಬಿಣದ ಚೂರುಗಳನ್ನು ಹಾಕಲು ಉಪಯೋಗಿಸಬಹುದಾಗಿರುತ್ತದೆ. ಈ ತೊಟ್ಟಿಗಳನ್ನು ದಿನಕ್ಕೆ 2 ಬಾರಿ ಖಾಲಿ ಮಾಡಿಸಲು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿರುತ್ತದೆ.

ಆದ್ದರಿಂದ 1. ಮಹಾತ್ಮ ಗಾಂಧಿ ರಸ್ತೆ, 2. ಕಬ್ಬನ್ ರಸ್ತೆ, 3. ಕಮರ್ಷಿಯಲ್ ಸ್ಟ್ರೀಟ್ ಮತ್ತು 4. ಕೆಂಪೇಗೌಡ ರಸ್ತೆಗಳಲ್ಲಿ ಜಾಹೀರಾತು ಹಕ್ಕುಗಳ ಎದುರಿಗೆ ಕಸದ ತೊಟ್ಟಿಗಳನ್ನು ಅಳವಡಿಸಿ ನಿರ್ವಹಣೆ ಮಾಡಲು ದಿನಾಂಕ:14/01/2008 ರಂದು ಟೆಂಡರ್ ಕಂ ಹರಾಜು ಮಾಡಲಾಗಿರುತ್ತದೆ. ಸದರಿ ಟೆಂಡರ್ ಕಂ ಹರಾಜಿನಲ್ಲಿ ಈ ಕೆಳಕಂಡ ಜಾಹೀರಾತು ಸಂಸ್ಥೆಯು ಭಾಗವಹಿಸಿ ಯಶಸ್ವಿ ಬಿಡ್‌ದಾರರಾಗಿರುತ್ತಾರೆ.

| ಕ್ರಮ ಸಂಖ್ಯೆ | ಜಾಹೀರಾತು ಸಂಸ್ಥೆಯ ಹೆಸರು | ಕನಿಷ್ಠ ನೆಲ ಬಾಡಿಗೆ | ಯಶಸ್ವಿ ಹರಾಜು/ಹಣಕಾಸಿನ ಬಿಡ್ ಮೊತ್ತ |
|---|---|---|---|
| 1 | ಮೆ॥ ಸುಜಯ್ ಅಡ್ವರ್ ಟೈಸಿಂಗ್ | ರೂ.4,00,000/– | ರೂ.36,00,009/– |

ಮೇಲಿನ ಗಾರ್ಬೆಜ್ ಬಿನ್ಸ್ ಮತ್ತು ಗಾರ್ಬೆಜ್ ಪಿಕ್ ಅಪ್ ಪಾಯಿಂಟ್‌ಗಳನ್ನು ನೆಲ ಬಾಡಿಗೆ ರೂ.36,00,009/–ಗಳನ್ನು ಪ್ರತಿ ವರ್ಷ ವರಮಾನವಾಗಿ ಪಡೆಯಬಹುದಾಗಿದೆ ಮತ್ತು ಜಾಹೀರಾತು ತೆರಿಗೆಯನ್ನು ಗಾರ್ಬೆಜ್ ಬಿನ್ಸ್‌ಗಳನ್ನು ಅಳವಡಿಸಿದ ನಂತರ ಜಾಹೀರಾತು ಪ್ರದರ್ಶನದ ಅಳತೆಗೆ ಅನುಗುಣವಾಗಿ ವಸೂಲಿ ಮಾಡಬಹುದಾಗಿರುತ್ತದೆ. ಸದರಿ ಬಿಡ್‌ದಾರರಿಗೆ 3 ವರ್ಷಗಳ ಅವಧಿಗೆ ಮೇಲ್ಕಂಡ ಪ್ಯಾಕೇಜ್‌ನಲ್ಲಿ ಬರುವ ಡಸ್ಟ್ ಬಿನ್‌ಗಳನ್ನು ಅಳವಡಿಸಿ, ನಿರ್ವಹಣೆ ಮಾಡಿ 03 ವರ್ಷಗಳ ನಂತರ ಮತ್ತೆ ನಗರ ಪಾಲಿಕೆಗೆ ಹಸ್ತಾಂತರಿಸುವ ಬಗ್ಗೆ ಕರಾರು ಮಾಡಿಕೊಳ್ಳಬೇಕಾಗಿದೆ.

ಟೆಂಡರ್ ನಿಯಮಾವಳಿಗಳಂತೆ ಮೊದಲ 12 ತಿಂಗಳುಗಳಿಗೆ ಕರಾರು ಪತ್ರ ಮಾಡಿಕೊಂಡು ನಂತರ ಯಶಸ್ವಿ ನಿರ್ವಹಣೆ ಮಾಡಿದ್ದಲ್ಲಿ 24 ತಿಂಗಳುಗಳಿಗೆ ವಿಸ್ತರಿಸಬಹುದಾಗಿದೆ. ಸದರಿ ಡಸ್ಟ್ ಬಿನ್‌ಗಳನ್ನು ಅಳವಡಿಸಿ ನಿರ್ವಹಣೆ ಮಾಡಿ ಜಾಹೀರಾತುಗಳನ್ನು ಮಾಡಿಕೊಳ್ಳಲು ಹಾಗೂ ಡಸ್ಟ್ ಬಿನ್‌ಗಳನ್ನು ಅಳವಡಿಸಿರುವ ಎಲ್ಲಾ ಪೀಠೋಪಕರಣಗಳೊಂದಿಗೆ ಪಾಲಿಕೆಗೆ ಹಸ್ತಾಂತರಿಸುವ ಷರತ್ತುಗೊಳಪಟ್ಟು 01 ವರ್ಷದ ಅವಧಿಗೆ ಅನುಮತಿ ನೀಡಲು ಹಾಗೂ ನಂತರ 24 ತಿಂಗಳುಗಳಿಗೆ ಕರಾರು ಮಾಡಿಕೊಳ್ಳಲು ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:20/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:16/04/2008 ರ ನಡವಳಿಗಳು

**ವಿಷಯದ ಸಂಖ್ಯೆ:48/2008-09**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದವರಿಗೆ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ವರ್ಗದವರಿಗೆ, ಮಹಿಳೆಯರಿಗೆ ಹಾಗೂ ಸಾಮಾನ್ಯ ವರ್ಗದವರಿಗೆ ಹಲವಾರು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲಾ 8 ವಲಯಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ.

ಈ ಎಲ್ಲಾ ಯೋಜನೆಗಳ ಹಾಗೂ ಕಾರ್ಯಕ್ರಮಗಳ ಉದ್ದೇಶ, ಕಾರ್ಯಕ್ರಮದ ವಿವರಣೆ, ಅರ್ಹತೆಗಳು, ವಾರ್ಷಿಕ ಆದಾಯದ ಮಿತಿ, ಆಯ್ಕೆ ವಿಧಾನ ಹಾಗೂ ತರಬೇತಿಯ ವಿವರಗಳನ್ನೊಳಗೊಂಡ ಮಾರ್ಗಸೂಚಿಗಳನ್ನು ಅಂತರಿಕ ಕಛೇರಿಯ ಟಿಪ್ಪಣಿ ಸಂಖ್ಯೆ:ಉಆ(ಕ)ಪಿಆರ್79/2007-08, ದಿನಾಂಕ:27/10/2007, 07/11/2007 ಹಾಗೂ 15/11/2007 ರಲ್ಲಿ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ತಿಳಿಸಲಾಗಿರುತ್ತದೆ. ಸರ್ಕಾರದಲ್ಲಿ ಅಳವಡಿಸಿಕೊಂಡಿರುವ ರೂಪರೇಷೆಗಳ ಮಾದರಿಯಲ್ಲಿಯೇ ಮಾರ್ಗಸೂಚಿಗಳನ್ನು ಮಹಾನಗರ ಪಾಲಿಕೆಯಲ್ಲಿಯೂ ಅಳವಡಿಸಿಕೊಂಡು ವಲಯ ಹಂತಗಳಲ್ಲಿ ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರಲು ಸೂಚಿಸಲಾಗಿತ್ತು.

ಈ ಮಧ್ಯೆ ಜನಪ್ರತಿನಿಧಿಗಳು, ವಿವಿಧ ಸಂಘ ಸಂಸ್ಥೆಗಳು ಹಾಗೂ ತರಬೇತಿ ಅಭ್ಯರ್ಥಿಗಳಿಂದ ಆಕ್ಷೇಪಣೆಗಳು ಬಂದ ಕಾರಣ ತರಬೇತಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಪರಿಷ್ಕೃತ ಮಾರ್ಗ ಸೂಚಿಯನ್ನು ವಿಶೇಷ ಆಯುಕ್ತರು (ಆಡಳಿತ) ರವರ ಕಛೇರಿಯ ಸಂಖ್ಯೆ:ಉಆ(ಕ)ಪಿಆರ್79/2007-08 ದಿನಾಂಕ:01/02/2008 ರಲ್ಲಿ ಈ ಕೆಳಕಂಡಂತೆ ಹೊರಡಿಸಲಾಗಿರುತ್ತದೆ.

1) ತರಬೇತಿಗಳಿಗೆ ಅರ್ಹರಾಗಬೇಕಾದರೆ ಅಭ್ಯರ್ಥಿಗಳ ವಯಸ್ಸು 16 ವರ್ಷಗಳು ತುಂಬಿರಬೇಕು. (ಆಯಾ ತರಬೇತಿಗಳಿಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಉತ್ತೀರ್ಣ/ಅನುತ್ತೀರ್ಣ ಕನಿಷ್ಠ ವಿದ್ಯಾರ್ಹತೆ ಹೊಂದಿರಬೇಕು)
2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ಮಾತ್ರ ಸಲ್ಲಿಸಬೇಕು. ಆದಾಯ ಪ್ರಮಾಣ ಪತ್ರ ಸಲ್ಲಿಕೆ ಕಡ್ಡಾಯವಾಗಿರುವುದಿಲ್ಲ.
3) ಹಿಂದುಳಿದ ವರ್ಗದವರಿಗೆ ಕುಟುಂಬದ ವಾರ್ಷಿಕ ಆದಾಯದ ಪ್ರಮಾಣದ ಮಿತಿ ರೂ.1.00 ಲಕ್ಷಕ್ಕೆ ವಿಸ್ತರಿಸಿದೆ.
4) ತರಬೇತುದಾರರು ತರಬೇತಿಗಳಿಗೆ ಗೈರು ಹಾಜರಿ ಅಥವಾ ತರಬೇತಿಯನ್ನು ಅಪೂರ್ಣಗೊಳಿಸುವ ಬಗ್ಗೆ ರೂ.20.00 ಗಳ ಛಾಪ ಕಾಗದದ ಬದಲಿಗೆ ಬಿಳಿಯ ಹಾಳೆಯಲ್ಲಿ ಎರಡು ಸಾಕ್ಷಿಗಳೊಂದಿಗೆ ಸ್ವಯಂ ಮುಚ್ಚಳಿಕೆ ಪತ್ರವನ್ನು ಪಡೆಯತಕ್ಕದ್ದು.

ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಅಭ್ಯರ್ಥಿಗಳ ಅರ್ಹತೆಗಳು ಹಾಗೂ ವಾರ್ಷಿಕ ಆದಾಯದ ಮಿತಿಯ ಮಾರ್ಗಸೂಚಿಗಳನ್ನು ಈಗಾಗಲೇ ಈ ಕೆಳಗಿನಂತೆ ನಿಗದಿಪಡಿಸಲಾಗಿರುತ್ತದೆ.

1) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಾಸಿಸುತ್ತಿರಬೇಕು. (ಮತದಾರರ ಗುರುತಿನ ಚೀಟಿ/ಮತದಾರರ ಪಟ್ಟಿ/ಪಡಿತರ ಚೀಟಿ/ಆಯಾ ವಾರ್ಡ್‌ಗಳಿಗೆ ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ವಾಸ ದೃಢೀಕರಣ ಪತ್ರ ಸಲ್ಲಿಸಬೇಕು).
2) ಅಭ್ಯರ್ಥಿಯ ವಯಸ್ಸು ಪ.ಜಾ/ಪ.ಪಂ.ದವರಿಗೆ 18 ರಿಂದ 40 ಹಾಗೂ ಹಿಂ.ಅ.ಸಂ. ದವರಿಗೆ 18 ರಿಂದ 35 ರೊಳಗೆ ವಯೋಮಿತಿ ಇರಬೇಕು (ಎಸ್.ಎಸ್.ಎಲ್.ಸಿ. ಅಂಕಪಟ್ಟಿ/ವರ್ಗಾವಣೆ ಪ್ರಮಾಣ ಪತ್ರ/ಜನನ ಪ್ರಮಾಣ ಪತ್ರವನ್ನು ಲಗತ್ತಿಸಬೇಕು).
3) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಕಳೆದ 5 ವರ್ಷದ ಅವಧಿಯೊಳಗಿನ ಜಾತಿ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
4) ಹಿಂದುಳಿದ ಅಲ್ಪಸಂಖ್ಯಾತರ ವರ್ಗದ ಅಭ್ಯರ್ಥಿಗಳು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಪಟ್ಟ ತಹಶೀಲ್ದಾರ್ ರವರಿಂದ ಪಡೆದ ಪ್ರಸಕ್ತ ಸಾಲಿನ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
5) ಅಲ್ಪ ಸಂಖ್ಯಾತರಿಗೆ ವಾರ್ಷಿಕ ಆದಾಯ ರೂ.2.00 ಲಕ್ಷಗಳ (ಎರಡು ಲಕ್ಷ ರೂಪಾಯಿಗಳು) ಒಳಗಿರಬೇಕು.

ಆದಕಾರಣ, ಈ ಮೊದಲು ಹೊರಡಿಸಿದ ಮಾರ್ಗಸೂಚಿಗಳು ಹಾಗೂ ಪರಿಷ್ಕೃತ ಮಾರ್ಗಸೂಚಿಗಳಂತೆ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿರುವುದರಿಂದ ಅದನ್ನು ಸ್ಥಿರೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17/03/2008 ರ ಟಿಪ್ಪಣಿ.

<u>**ತೀರ್ಮಾನ:**</u> ಆಯುಕ್ತರವರ ದಿನಾಂಕ:17/03/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು